ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರಃ2784/2021

ಚಾಸಾಃ2 ಪ್ರಾಸಾಃ2

ದಿನಾಂಕಃ 17.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪ್ರತಾಪ್ ಶೆಟ್ಟಿ |
| ತಂದೆಯ ಹೆಸರು | : | ನರಸಿಂಹ ಶೆಟ್ಟಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೃಷಿ |
| ವಾಸ ಸ್ಥಳ | : | ಉಳ್ತೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 14-08-2021 ರಂದು ಉಳ್ತೂರಿನಲ್ಲಿ ಅಪಘಾತವಾಗಿದ್ದ ಸ್ಥಳದಲ್ಲಿ ಪೊಲೀಸರು ಹಾಜರು ಇರುವಂತೆ ಸೂಚಿಸಿದ್ದು ನಾನು ಮತ್ತು ಚಾಸಾ-3 ರವರು ಹಾಜರು ಇದ್ದು, ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 5-30 ರಿಂದ 6-15ರವರೆಗೂ ಜರುಗಿಸಿ ನಕ್ಷೆ ತಯಾರಿಸಿ ಫೋಟೋ ತೆಗೆದು ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

ಅದೇ ದಿನ ಸಂಜೆ 6-30ರ ಸಮಯದಲ್ಲಿ ನಾನು ಮತ್ತು ಚಾಸಾ-3 ರವರು ಪೊಲೀಸರು 407 ಮತ್ತು ದ್ವಿ ಚಕ್ರ ವಾಹನವನ್ನು ವಶಕ್ಕೆ ಪಡೆಯುವ ವೇಳೆಗೆ ಹಾಜರು ಇದ್ದು, ವಾಹನವನ್ನು ಚಾಸಾ-1 ರವರು ಗುರುತಿಸಿದ್ದು, ಪಂಚನಾಮೆಯನ್ನು ಸಂಜೆ 6-30 ರಿಂದ 7ರವರೆಗೂ ಜರುಗಿಸಿ ವಶಕ್ಕೆ ಪಡೆದು ಫೋಟೋ ತೆಗೆದು ಸಹಿ ಪಡೆದಿರುತ್ತಾರೆ. ಅಪಘಾತದಿಂದ ಸೃಜನ್ ಶೆಟ್ಟಿ ಮೋಟಾರು ಸೈಕಲ್ ಸವಾರ ಮೃತಪಟ್ಟಿರುವ ಬಗ್ಗೆ ನನಗೆ ತಿಳಿದಿರುತ್ತದೆ.

ಸಾಕ್ಷಿಗೆ ನಿಪಿ-2 ರಿಂದ 11ನ್ನು ತೋರಿಸಲಾಗಿ, ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-2 ರಿಂದ 4ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಬಿ) ರಿಂದ ನಿಪಿ-4(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದಃ**

ಮೃತ ಸೃಜನ್ ಶೆಟ್ಟಿ ರವರ ತಂದೆ ಈ ದಿನ ನ್ಯಾಯಾಲಯದ ಮುಂದೆ ಹಾಜರು ಇದ್ದಾರೆ. ಅವರು ಸಾಮಾನ್ಯವಾಗಿ ಪರಿಚಯಸ್ಥರು. ಚಾಸಾ-1 ನನ್ನ ಸ್ನೇಹಿತ. ಚಾಸಾ-1 ಮತ್ತು 3 ರವರು ಉಳ್ತೂರು ವಾಲಿಬಾಲು ಟೀಂನ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1ರವರು ಘಟನೆಯಾಗುವ 10 ವರ್ಷದಿಂದ ಸ್ನೇಹಿತರು. ನಾನು ಮತ್ತು ಚಾಸಾ-3 ರವರು ಗ್ರಾಮಸ್ಥರು ಹಾಗೂ ಸ್ನೇಹಿತರು. ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಪೊಲೀಸರು ತಡೆದು ನಿಲ್ಲಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಸೇರಿದಂತೆ 4 ಜನ ಇದ್ದೇವು.

ಪೊಲೀಸರು ಲಿಖಿತವಾಗಿ ತಿಳುವಳಿಕೆ ಹೊರಡಿಸಿಲ್ಲ. ನಾನು ಹೋದಾಗ ಪೊಲೀಸರು ಸ್ಥಳದಲ್ಲಿ ಇದ್ದರು. ನಾನು ಒಟ್ಟು 2 ಸಹಿ ಮಾಡಿರುತ್ತೇನೆ. ಸಹಿ ಮಾಡಿದ ದಾಖಲೆಗಳು ಎಷ್ಟು ಪುಟಗಳಿವೆ ಎಂದು ನೆನಪಿಲ್ಲ. ಸಹಿ ಮಾಡಿದ ದಾಖಲೆಗಳು ಯಾರ ಕೈ ಬರಹದಲ್ಲಿತ್ತು ಎಂದು ನನಗೆ ತಿಳಿದಿಲ್ಲ. ಅದನ್ನು ಬೆರಳಚ್ಚು ಮಾಡಲಾಗಿತ್ತು. ಪೊಲೀಸ್ ಜೀಪಿನಲ್ಲಿ ಬೆರಳಚ್ಚು ಮಾಡಿರುತ್ತಾರೆ. ಪೊಲೀಸರು ಉಳ್ತೂರಿನ ರಸ್ತೆಯ ಪಕ್ಕದಲ್ಲಿ ಜೀಪನ್ನು ನಿಲ್ಲಿಸಿದ್ದರು. ಅದು ರಸ್ತೆಯ ದಕ್ಷಿಣ ದಿಕ್ಕು ಆಗುತ್ತದೆ. ದಾಖಲೆಯನ್ನು ಯಾರು ಬೆರಳಚ್ಚು ಮಾಡಿದ್ದು ಎಂದು ನನಗೆ ತಿಳಿದಿಲ್ಲ. ಅದನ್ನು ಯಾರ ಮಾಹಿತಿ ಪ್ರಕಾರ ಬೆರಳಚ್ಚು ಮಾಡಿರುವುದು ಎಂದು ನನಗೆ ತಿಳಿದಿಲ್ಲ.

ದಾಖಲೆಗಳಿಗೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಸ್ಥಳ ಪಂಚನಾಮೆಗೆ ಜೀಪಿನ ಹತ್ತಿರ ಸಹಿ ಮಾಡಿರುತ್ತೇನೆ. ಅಪಘಾತದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೀಪು ನಿಂತಿತ್ತು. ಪೊಲೀಸರು ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಅಪಘಾತವಾಗಿರುತ್ತದೆ ಎಂದು ಹೇಳಿರುವುದಿಲ್ಲ. ಚಾಸಾ-1 ರವರು ತೋರಿಸಿರುತ್ತಾರೆ. ಸಹಿ ಮಾಡಿದ ದಾಖಲೆಗಳಲ್ಲಿ ಏನೆಲ್ಲಾ ಬರೆದಿದೆ ಎಂದು ಹೇಳಬಹುದು. ನಮಗೆ ತಿಳುವಳಿಕೆ ಹೊರಡಿಸಿ ಸ್ಥಳಕ್ಕೆ ಬರಮಾಡಿಕೊಂಡಿರುವುದಾಗಿ ಪಂಚನಾಮೆಯಲ್ಲಿ ಕಾಣಿಸಿರುವುದಿಲ್ಲ. ದಾಖಲೆಯಲ್ಲಿ ರಸ್ತೆಯ ದಕ್ಷಿಣ ದಿಕ್ಕಿಗೆ ಅಪಘಾತವಾಗಿರುವುದಾಗಿ ಕಾಣಿಸಿರುತ್ತಾರೆ. ಸ್ಥಳದಲ್ಲಿ ಸಂಜೆ 6-15ಕ್ಕೆ ಸಹಿ ಮಾಡಿರುತ್ತೇನೆ. ಆಗ ಇನ್ನೂ ಕತ್ತಲೆಯಾಗಿರಲಿಲ್ಲ.

ಅಪಘಾತವಾದ ಸ್ಥಳ ಉತ್ತರಕ್ಕೆ ಕೆದೂರು ತೆಕ್ಕಟ್ಟೆ ಮುಖ್ಯ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಮಲ್ಲಿರವರ ಮನೆ ಇದೆ. ಪೂರ್ವ ಮತ್ತು ಪಶ್ಚಿಮಕ್ಕೆ ದೇವಸ್ಥಾನ ಮತ್ತು ಭಾಸ್ಕರ ಶೆಟ್ಟಿರವರ ಮನೆ ಇದೆ. ದಾಖಲೆಯಲ್ಲಿ ರಸ್ತೆಯ ಅಗಲವನ್ನು ನಮೂದಿಸಿಲ್ಲ. ಅಪಘಾತದ ಬಗ್ಗೆ ಮಾಹಿತಿ ಕಾಣಿಸಿರುತ್ತಾರೆ. ಮಾಹಿತಿಯನ್ನು ಚಾಸಾ-1 ರವರು ನೀಡಿದಂತೆ ಪೊಲೀಸರು ಬರೆದಿರುತ್ತಾರೆ. ಸದ್ರಿ ದಾಖಲೆಯನ್ನು

ತಯಾರಿಸಲು ಪೊಲೀಸರಿಗೆ ಅಪಘಾತವಾಗಿರಬಹುದಾದ ಸ್ಥಳದ ಬಗ್ಗೆ ಮಾಹಿತಿ ನೀಡಿರುತ್ತೇನೆ. ಸ್ಥಳವನ್ನು ನಾನು ಗಮನಿಸಿ ಮಾಹಿತಿ ನೀಡಿರುತ್ತೇನೆ.

ನನ್ನ ಸಮಕ್ಷಮ ಸದ್ರಿ ದಾಖಲೆಗೆ ಚಾಸಾ-1, 3 ಹಾಗೂ ಒಬ್ಬರು ಪೊಲೀಸರು ಸಹಿ ಮಾಡಿರುತ್ತಾರೆ.

**( ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**